**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 04-03-2024.**

**ಮುಂದುವರೆದ ಪಾಟೀ ಸವಾಲು - 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಿಂದ :**

**1)** ಈ ಹಂತದಲ್ಲಿ ಪ್ರತಿವಾದಿ 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರು ಕಳೆದ ಬಾರಿಯ ಪಾಟೀ ಸವಾಲಿನಲ್ಲಿ ಸಾಕ್ಷಿಯು ಕಡತದಲ್ಲಿರುವ ಪಡಿತರ ಚೀಟಿಯನ್ನು ಪಡಿತರ ಚೀಟಿ ಎಂದು ಒಪ್ಪಿಕೊಂಡು ಅದರಲ್ಲಿ ನಮೂದು ಆಗಿರುವ ವ್ಯಕ್ತಿಗಳ ಹೆಸರುಗಳನ್ನು ಒಪ್ಪಿಕೊಂಡಿರುವುದರಿಂದ ಸದರಿ ದಾಖಲೆಯನ್ನು ಗುರುತಿಸಲು ಕೋರಿದ್ದು, ಕೇವಲ ಸದರಿ ದಾಖಲೆ ಪಡಿತರ ಚೀಟಿ ಮತ್ತು ಅದರಲ್ಲಿ ಕಳೆದ ಬಾರಿ ಪಾಟೀ ಸವಾಲಿನಲ್ಲಿ ಹೇಳಿದ ವ್ಯಕ್ತಿಗಳ ಹೆಸರುಗಳು ನಮೂದು ಆಗಿವೆ ಎಂಬ ಕಾರಣಕ್ಕೆ ಮಾತ್ರ ಸೀಮಿತವಾಗಿ ಅದನ್ನು - **ನಿ.ಡಿ.1** ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಡಿ.1 ಸೃಷ್ಟಿ ಮಾಡಿಕೊಂಡ ದಾಖಲೆ ಎಂದು ಪುನಃ ಹೇಳಿರುತ್ತಾರೆ. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ರಾಮಪ್ಪ-ನಂಜಪ್ಪ, ನಂಜಪ್ಪ-ನಾರಾಯಣಪ್ಪ, ನಂಜಪ್ಪ-ಭಾಗ್ಯಮ್ಮ, ರಾಮಕ್ಕ-ನಂಜಪ್ಪ, ರೇವಣ್ಣ ತಂದೆ ಸುಬ್ಬಣ್ಣ, ನಂಜಪ್ಪ-ಗಾಯತ್ರಿ, ಲಕ್ಷ್ಮಮ್ಮ, ನಂಜಪ್ಪ-ವೆಂಕಟಮ್ಮ, ನಂಜಪ್ಪ-ಕೆಂಪಣ್ಣ, ನಂಜಪ್ಪ-ರೇವಣ್ಣ ರವರ ಹೆಸರಿನಲ್ಲಿ ಖಾತೆ ಮಾಡಿ ಹಣ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಒಟ್ಟು ಕುಟುಂಬದ ಯಜಮಾನರಾಗಿದ್ದು, ಆ ಕಾರಣದಿಂದ ಸದರಿ ಜಂಟಿ ಖಾತೆಗಳಲ್ಲಿ ಹಣ ಇಟ್ಟಿದ್ದರು ಎಂದರೆ ಸರಿಯಲ್ಲ. ಈ ದಾವೆಯ ಹೊರತಾಗಿ ನಾನು ಬೇರೆ ಯಾವುದೇ ದಾವೆ ದಾಖಲಿಸಿರುವುದಿಲ್ಲ. ನಾನು ಈಗ ಒಂದು ದಾಖಲೆಯ ದೃಢೀಕೃತ ನಕಲನ್ನು ನೋಡುತ್ತಿದ್ದು ಸದರಿ ದಾಖಲೆಗೆ ನಾನು ಮತ್ತು ಹಾಗೂ 3 ನೇ ಪ್ರತಿವಾದಿ ಸಹಿ ಮಾಡಿರುತ್ತೇವೆಂದು ಒಪ್ಪಿಕೊಂಡ ಮೇರೆಗೆ ಅಸಲು ದಾವಾ ಸಂಖ್ಯೆ 622/2022 ರ ವಾದ ಪತ್ರದ ದೃಢೀಕೃತ ನಕಲನ್ನು - **ನಿ.ಡಿ.2** ಎಂದು ಗುರುತಿಸಲಾಯಿತು. ಸದರಿ ದಾವೆಯ

ದಾವಾಸ್ವತ್ತಿಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲ. ದಾವಾಸ್ವತ್ತುಗಳು ಮತ್ತು ಸದರಿ ದಾವೆಯ ದಾವಾಸ್ವತ್ತು ನಮ್ಮ ತಂದೆ ಸಂಪಾದಿಸಿದ ಸ್ವತ್ತುಗಳು. ಈ ದಾವೆ ದಾಖಲಿಸಿರುವುದನ್ನು ಮರೆಮಾಚಿ ನಿ.ಡಿ.2 ರಂತೆ ಇನ್ನೊಂದು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರಿಗೆ ಚಿಕ್ಕನಹಳ್ಳಿಯ ಸರ್ವೆ ಸಂಖ್ಯೆ 44-2 ವಿಸ್ತೀರ್ಣ 1 ಎಕರೆ 3 ಗುಂಟೆ ಸಹ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಬಿಟ್ಟು ಈ ದಾವೆ ದಾಖಲಿಸಿರುತ್ತೇವೆ ಎಂದರೆ ಗೊತ್ತಿಲ್ಲ. ಬೇರೆ ಯಾವುದಾದರೂ ಸ್ವತ್ತನು ಬಿಟ್ಟಿದ್ದೇವೋ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಜೀವಿತ ಕಾಲದಲ್ಲಿ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳ ಅವರ ಜೊತೆಯಲ್ಲಿ ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದರೆ ಸರಿ. ಒಟ್ಟು ಕುಟುಂಬದಲ್ಲಿ ಇದ್ದಾಗ ನಮ್ಮ ತಂದೆ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿ ಸರ್ವೆ ಸಂಖ್ಯೆ 48-2 ವಿಸ್ತೀರ್ಣ 1 ಎಕರೆ 37 ಗುಂಟೆ ಖರೀದಿಸಿದ್ದರು ಎಂದರೆ ಸರಿ. ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ದಾವಾಸ್ವತ್ತಿನಲ್ಲಿ ಸೇರಿಸಬಾರದು ಎಂದು ನಾವು ಸೇರಿಸಿರುವುದಿಲ್ಲ. 1 ನೇ ಪ್ರತಿವಾದಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ನನ್ನ ಹಾಗೂ ಇತರರ ವಿರುದ್ಧ ಒಂದು ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಸಂಖ್ಯೆ ಆರ್.ಎ. ಸಂಖ್ಯೆ 168-2002-03 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡಿದ್ದೆನು ಎಂದರೆ ನನಗೆ ನೆನಪಿಲ್ಲ. ನಾನು ಈಗ ಒಂದು ವಕಾಲತ್‌ಅನ್ನು ನೋಡಿ ಅದರಲ್ಲಿರುವ ಸಹಿ ನನ್ನದೆಂದು ಒಪ್ಪಿಕೊಂಡ ಮೇರೆಗೆ ಸದರಿ ವಕಾಲತ್ ಅನ್ನು - **ನಿ.ಡಿ.3** ಎಂದು ಗುರುತಿಸಲಾಯಿತು. ಸದರಿ ವಿಚಾರ ನನಗೆ ನೆನಪಿಲ್ಲದೇ ಇರುವುದರಿಂದ ಈ ದಾವೆಯಲ್ಲಿ ಹೇಳಿರುವುದಿಲ್ಲ. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿ ಕುಟುಂಬದ ಸದಸ್ಯರ ವಿವರವನ್ನು ಹೇಳಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನನಗೆ ಈಗ ಒಂದು ಲಗ್ನಪತ್ರಿಕೆಯನ್ನು ತೋರಿಸಿದ್ದು, ಸದರಿ ದಾಖಲೆಯಲ್ಲಿ ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪನ ಮಗ ರಾಮಣ್ಣ ಅವರ ಹೆಸರು ಇದೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು - **ನಿ.ಡಿ.4** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನಮ್ಮ ತಂದೆಯ ಹೆಸರನ್ನು ಅವರೇ ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತೇನೆ. ನಮ್ಮ ತಂದೆ ಒಟ್ಟು ಕುಟುಂಬದ ಯಜಮಾನರಾಗಿರುವುದರಿಂದ ರಾಮಣ್ಣ ಅವರ ಮದುವೆ ಅವರೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.35 ರಲ್ಲಿ ನಮ್ಮ ತಾಯಿಯ ಹೆಸರು ಇದೆ, ಆದರೆ ಸದರಿ ದಾಖಲೆ ನಮಗೆ ಸಂಬಂಧಿಸಿದ್ದೋ ಅಲ್ಲವೋ ಎಂದು ನನಗೆ ಗೊತ್ತಿಲ್ಲ. ನಿ.ಪಿ.35 ರಲ್ಲಿ ಇರುವ ಮುನಿಯಮ್ಮ ಸುಬ್ಬಣ್ಣ ಅವರ ಮೊದಲನೇ ಹೆಂಡತಿ ಹುಚ್ಚಮ್ಮ ಅವರ ಅಕ್ಕ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ನಮ್ಮ ತಂದೆ ಕುಟುಂಬದ ಯಜಮಾನರಾದಾಗ ಒಟ್ಟು ಕುಟುಂಬದ ಸ್ವತ್ತುಗಳೊಂದಿಗೆ ಉಳುಮೆ ಮಾಡಿದ ಸ್ವತ್ತಾಗಿದ್ದು, ಅದಕ್ಕೂ ನಮಗೂ ಸಂಬಂಧ ಇಲ್ಲ ಎಂದರೆ ನಮ್ಮ ತಂದೆಯ ಸ್ವತ್ತುಗಳಿಗೆ ಮಾತ್ರ ನಾನು ದಾವೆ ಸಲ್ಲಿಸಿದ್ದು ನಿ.ಪಿ.35 ರ ಸ್ವತ್ತು ಯಾವುದು ಎಂದು ನನಗೆ ಗೊತ್ತಿಲ್ಲ. ನಿ.ಪಿ.35 ರ ಸ್ವತ್ತು 5 ರಿಂದ 7 ನೇ ಪ್ರತಿವಾದಿಗಳ ಆಸ್ತಿ ಹಾಗೂ ಸದರಿ ಸ್ವತ್ತಿಗೂ ನಮಗೂ ಸಂಬಂಧ ಇಲ್ಲ ಎಂದರೆ ನಮಗೆ ಗೊತ್ತಿಲ್ಲ. ನಿ.ಪಿ.21 ರಂತೆ ಸರ್ವೆ ಸಂಖ್ಯೆ 28-1 ರಲ್ಲಿ ನಮ್ಮ ತಂದೆಯ ಹೆಸರಿಗೆ ಇರುವುದು 1 ಎಕರೆ ಮಾತ್ರ ಹಾಗೂ ನಾವು 2 ಎಕರೆ 20 ಗುಂಟೆ ಜಮೀನಿಗೆ ಈ ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.21 ರ ಪ್ರಕಾರ ನಮ್ಮ ತಂದೆಯ ಹೆಸರಿಗೆ 1 ಎಕರೆ ಹಾಗೂ ಕೇತಮಂಗಲದ ಮುನಿಯಪ್ಪ ಬಿನ್ ಕಾಟಪ್ಪ ಅವರಿಗೆ 1 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ನಮ್ಮ ತಂದೆಯ ಸ್ಮಶಾನ ಸರ್ಕಾರಿ ಸ್ಮಶಾನದಲ್ಲಿ ಇದ್ದು, ಈಗ 1 ಮತ್ತು 2 ನೇ ಪ್ರತಿವಾದಿಗಳ ಜಮೀನಿನಲ್ಲಿ ಹಾಕಿಕೊಂಡಿರುತ್ತಾರೆ. ನಾನು ಈಗ ಒಂದು ಛಾಯಾಚಿತ್ರವನ್ನು ನೋಡುತ್ತಿದ್ದು ಸದರಿ ಛಾಯಾಚಿತ್ರದಲ್ಲಿ ಕಂಡುಬರುವ ಸ್ಥಳದಲ್ಲಿ ಸುಬ್ಬಣ್ಣ, ಕೆಂಪಮ್ಮ, ನಂಜಪ್ಪ ಮತ್ತು ಮುನಿಯಮ್ಮ ಅವರ ಸ್ಮಶಾನ

ಒಂದೇ ಕಡೆ ಇದ್ದು, ಅದರಲ್ಲಿ ನಂಜಪ್ಪ ಮತ್ತು ಮುನಿಯಮ್ಮ ಅವರ ಸ್ಮಶಾನವನ್ನು ಈ ದಾವೆ ದಾಖಲಿಸಿದ ನಂತರ ಬೇರೆ ಕಡೆ ಹಾಕಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಛಾಯಾಚಿತ್ರವನ್ನು **ನಿ.ಡಿ.**5 ಎಂದು ಗುರುತಿಸಲಾಯಿತು. ಮೊದಲು ಸದರಿ ನಾಲ್ಕೂ ಸ್ಮಶಾನಗಳು ಈಗ ನನಗೆ ತೋರಿಸುತ್ತಿರುವ ಛಾಯಾಚಿತ್ರದಲ್ಲಿರುವ ಜಮೀನಿನಲ್ಲಿ ಇತ್ತು, ಆನಂತರ ಬೇರೆ ಕಡೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ಛಾಯಾಚಿತ್ರವನ್ನು - **ನಿ.ಡಿ.6** ಎಂದು ಗುರುತಿಸಲಾಯಿತು. ಈಗ ನಾನು ಒಂದು ಛಾಯಾಚಿತ್ರವನ್ನು ನೋಡುತ್ತಿದ್ದು ಅದರಲ್ಲಿರುವ ಭಾವಚಿತ್ರ ಹಾಗೂ ಹೆಸರು ಇತ್ಯಾದಿ ನಮ್ಮ ತಂದೆಯದ್ದು ಎಂದು ಒಪ್ಪಿ ಕೊಂಡ ಮೇರೆಗೆ ಸದರಿ ಛಾಯಾಚಿತ್ರವನ್ನು - **ನಿ.ಡಿ.**7 ಎಂದು ಗುರುತಿಸಲಾಯಿತು. ನಾನು ನಮ್ಮ ತಂದೆ ತಾಯಿಯ ಸ್ಮಶಾನ ಸರ್ಕಾರಿ ಜಾಗದಲ್ಲಿ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 15 ಮತ್ತು 18 ಒಂದೇ ಆಗಿದ್ದು ಎರಡು ಬಾರಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**(5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**